**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 5784/2023 ಸಿ.ಡಬ್ಲೂ.8 ಪಿ.ಡಬ್ಲೂ.6

| | |
|---|---|
| ಹೆಸರು | ದಿನೇಶ |
| ತಂದೆ/ಗಂಡ | ತಮ್ಮಯ್ಯಾ |
| ವಯಸ್ಸು | 38 ವರ್ಷ |
| ಉದ್ಯೋಗ | ಪಿ ಎಸ್ ಐ ಸಂತಪೂರ ಪೋಲಿಸ್ ಠಾಣೆ ಜಿಲ್ಲಾಃ ಬಿದರ |
| ವಾಸಸ್ಥಳ | ಬಿದರ |

ದಿನಾಂಕ 09-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 15-08-2023 ರಿಂದ ದಿಃ 07-08-2024 ರವರೆಗೆ ಮಾದನಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20-09-2023 ರಂದು ಚಾಸಾ 7 ರವರ ಕಡೆಯಿಂದ ಈ ಪ್ರಕರಣದಲ್ಲಿ ಕಡತವನ್ನು ಪಡೆದು ತನಿಖೆ ಕೈಗೊಂಡು ಅದೇ ದಿನ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ಹಾಜರಾದ ಕಾರಣ ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 22-09-2023 ರಂದು ಗಾಯದ ಪ್ರಮಾಣ ಪತ್ರವನ್ನು ಕಲಬುರಗಿ ಜಿಲ್ಲಾ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 6(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಮ. ವಿ. ಇ. ವಕೀಲರಿಂದ:

ಸಾಮಾನ್ಯವಾಗಿ ಯಾರಾದಾರು ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ಹೋದರೆ ವೈದ್ಯರು ಎಮಎಲಸಿ ದಾಖಲಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಎಮಎಲಸಿ ದಾಖಲಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮಾದನ ಹಿಪ್ಪರಗಾ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ನಿಪಿ. 6 ರಲ್ಲಿ ಚೆನ್ನಮ್ಮಾ ರವರು ಸಹ ಚಾಸಾ 1 ರವರ ಜೊತೆಗೆ ಆಸ್ಪತ್ರೆಗೆ ಹೋಗಿದ್ದರು ಅಂತಾ ನಮೂದು ಇದ್ದು, ಅವರ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ನಿಪಿ.

4 ರ ಕಾಲಂ ನಂಬರ 3(ಸಿ)ಯಲ್ಲಿ ಮನೆಯಲ್ಲಿ ಉಪಚಾರ ಪಡೆದುಕೊಂಡು ನಂತರ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದು ಕುಟುಂಬದವರೊಂದಿಗೆ ವಿಚಾರಣೆ ಮಾಡಿ ತಡವಾಗಿ ದೂರು ಸಲ್ಲಿಸಿರುತ್ತೇನೆ ಅಂತಾ ನಮೂದು ಇರುತ್ತದೆ ಎಂದರೆ ಸರಿ. ನಾನು ಮನೆಯಲ್ಲಿ ಯಾರ ಮುಖಾಂತರ ಉಪಚಾರ ಪಡೆದಿರುತ್ತಾರೆ ಅಂತಾ ವಿಚಾರಣೆ ಮಾಡಿರುವುದಿಲ್ಲ. ಸಾಮಾನ್ಯವಾಗಿ ಮೇಲಿನಿಂದ ನೀರು ಬಿದ್ದರೆ ಕೆಳಗೆ ಹರಿದು ಹೋಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾವು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಿದ್ದರೂ ಸಹಿತ ಸಾಕ್ಷಿದಾರರು ಹೇಳಿಕೆಯನ್ನು ನೀಡಿರುವುದಿಲ್ಲ.ಚಾಸಾ 1 ಮತ್ತು ಆರೋಪಿತರು ಸಂಬಂಧಿಕರು ಎಂದರೆ ಸರಿ. ನನ್ನ ತನಿಖಾ ಸಮಯದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂತಾ ತಿಳಿದು ಬಂದರೂ ಸಹಿತ ಆರೋಪಿತರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 20-09-2023 ರಂದು ಚಾಸಾ 7 ರವರ ಕಡೆಯಿಂದ ಈ ಪ್ರಕರಣದಲ್ಲಿ ಕಡತವನ್ನು ಪಡೆದು ತನಿಖೆ ಕೈಗೊಂಡು ಅದೇ ದಿನ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ಹಾಜರಾದ ಕಾರಣ ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 22-09-2023 ರಂದು ಗಾಯದ ಪ್ರಮಾಣ ಪತ್ರವನ್ನು ಕಲಬುರಗಿ ಜಿಲ್ಲಾ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ